# ಗೋವಿಂದನ ಗುಂಗಿನಲ್ಲಿ...

'ನಂದೀಶ' ಚಿತ್ರದ ಗೀತೆಗಳ ಧ್ವನಿಮುದ್ರಿಕೆ ಪೇಟೆಗೆ ಬಂದಿದೆ. ಈ ಚಿತ್ರದ ಮೂಲಕ ಕೋಮಲ್ ಮತ್ತೊಂದು ಸಾಹಸಕ್ಕೆ ಮುಂದಾಗಿದ್ದಾರೆ. ಈವರೆಗೆ ನಟನೆ, ನಿರ್ಮಾಣ, ವಿತರಣೆಯಲ್ಲಿ ಸಿಹಿಕಹಿ ಕಂಡಿರುವ ಅವರು, ಇದೀಗ ಆಡಿಯೊ ಕಂಪೆನಿಯೊಂದನ್ನು ಶುರು ಮಾಡಿದ್ದಾರೆ.

ಕೋಮಲ್‌ರ ಹೊಸ ಆಡಿಯೊ ಕಂಪೆನಿಯ ಹೆಸರು 'ಗೋವಿಂದಾಯ ನಮಃ ಆಡಿಯೊ ಹೌಸ್'. 2012ರಲ್ಲಿ ಭಾರೀ ಯಶಸ್ಸು ಪಡೆದ ಚಿತ್ರದ ಹೆಸರನ್ನೇ ತಮ್ಮ ಆಡಿಯೊ ಕಂಪನಿಗೆ ಕೋಮಲ್ ನಾಮಕರಣ ಮಾಡಿದ್ದಾರೆ. ಅಂದ ಹಾಗೆ, ಈ ಕಂಪೆನಿಯ ಮೂಲಕ ಪೇಟೆಗೆ ಬಂದಿರುವ 'ನಂದೀಶ' ಚಿತ್ರದಲ್ಲಿ ಐದು ಗೀತೆಗಳಿವೆ. 'ಹಂಸಲೇಖಾ ಸಂಗೀತ–ಸಾಹಿತ್ಯದಲ್ಲಿ ಗೀತೆಗಳು ಸೊಗಸಾಗಿ ಮೂಡಿಬಂದಿವೆ' ಎನ್ನುವುದು ನಿರ್ದೇಶಕ ಸಾಯಿಪ್ರಕಾಶ್‌ರ ಅನಿಸಿಕೆ.

ನಿರ್ಮಾಪಕರೂ ಆದ ಕೋಮಲ್ 'ನಂದೀಶ'ನ ಹಾಡುಗಳನ್ನು ಚೆಂದಗೊಳಿಸುವ ಬಗ್ಗೆ ಮುತುವರ್ಜಿ ವಹಿಸಿದ್ದಾರೆ. ಸ್ವಿಟ್ಜರ್‌ಲೆಂಡ್‌ನ ಸುಂದರ ಹೊರಾಂಗಣದಲ್ಲಿ ಅವರು ಹಾಡುಗಳ ಚಿತ್ರೀಕರಣ ನಡೆಸಿದ್ದಾರಂತೆ. ಒಂದು ಗೀತೆಯಲ್ಲಿ ಕೋಮಲ್ ಅವರ ಮಗಳು ಬೇಬಿ ತುಷಾರ ಹೆಜ್ಜೆ ಹಾಕಿದ್ದಾಳಂತೆ.

ಕೋಮಲ್‌ರ ಸೋದರ ಜಗ್ಗೇಶರಿಗೂ 'ನಂದೀಶ'ನ ಗೆಲುವಿನ ಬಗ್ಗೆ ನೆಚ್ಚು. "ಚಿತ್ರಕಥೆ ಸೊಗಸಾಗಿದೆ. ಈ ಚಿತ್ರದ ಮೂಲಕ ಕೋಮಲ್ ಅವರೊಳಗಿನ ಅದ್ಭುತ ನಟ ಪ್ರಕಟಗೊಳ್ಳಲಿದ್ದಾನೆ" ಎನ್ನುವುದು ಅವರ ವಿಶ್ವಾಸ. 'ಗೋವಿಂದಾಯ ನಮಃ' ಚಿತ್ರದ ಯಶಸ್ವಿ ಜೋಡಿ ಕೋಮಲ್–ಪರೂಲ್ ಈ ಚಿತ್ರದಲ್ಲಿ ಮುಂದುವರಿದಿರುವುದು ಕೂಡ ಜಗ್ಗೇಶ್‌ರ ವಿಶ್ವಾಸಕ್ಕೆ ಕಾರಣವಾಗಿದೆ.



# ವರ್ಷದ ಕೊನೆಯ ಸಂಭ್ರಮ!

ತಮಿಳು ಚಿತ್ರರಂಗದ ತಾರಾ ವರ್ಚಸ್ಸಿನ ನಿರ್ದೇಶಕ ಸಮುದ್ರಖಣಿ ನಿರ್ದೇಶನದ ಮೊದಲ ಕನ್ನಡ ಚಿತ್ರ 'ಯಾರೇ ಕೂಗಾಡಲಿ' ಪ್ರೇಕ್ಷಕರಲ್ಲಿ ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. ಪುನೀತ್ ರಾಜಕುಮಾರ್ ಅಭಿನಯದ ಈ ಚಿತ್ರ ತೆರೆ ಕಾಣುವ ಮೊದಲೇ ನಿರ್ಮಾಪಕರ ಬಂಡವಾಳವನ್ನು ವಾಪಸ್ ತಂದು ಕೊಟ್ಟಿರುವುದು ವಿಶೇಷ. 'ಜಾಕಿ', 'ಅಣ್ಣಾ ಬಾಂಡ್' ಚಿತ್ರಗಳ ಸರಿಸಮಕ್ಕೆ 'ಯಾರೇ ಕೂಗಾಡಲಿ' ಚಿತ್ರದ ವ್ಯವಹಾರವೂ ನಡೆದಿದೆ ಎನ್ನುವುದು ಸುದ್ದಿ.



'ಯಾರೇ ಕೂಗಾಡಲಿ' ತಮಿಳಿನ 'ಪೊರಾಲಿ' ಚಿತ್ರದ ರೀಮೇಕ್. ಮೂಲಚಿತ್ರದ ನಿರ್ದೇಶಕ ಸಮುದ್ರಖಣಿ ಅವರೇ ಕನ್ನಡ ಚಿತ್ರವನ್ನೂ ನಿರ್ದೇಶಿಸಿದ್ದಾರೆ. ಸಂಭಾಷಣೆ ಬರೆದಿರುವ ಗುರುಪ್ರಸಾದ್ ಸೇರಿದಂತೆ ಇಡೀ ಚಿತ್ರ ತಂಡ, ರೀಮೇಕ್ ಚಿತ್ರಕ್ಕೆ ಕನ್ನಡ ಸೊಗಡು ನೀಡುವಲ್ಲಿ ಶ್ರಮಿಸಿದೆಯಂತೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಗಿರೀಶ ಕಾರ್ನಾಡರು ನಟಿಸಿರುವುದು ಚಿತ್ರದ ಇನ್ನೊಂದು ವಿಶೇಷ. ಜಾಕಿ ಚಿತ್ರದ ಭಾವನಾ ಈ ಚಿತ್ರದಲ್ಲೂ ಪುನೀತ್‌ಗೆ ಜೋಡಿಯಾಗಿದ್ದಾರೆ.

ನಿರ್ಮಾಪಕ ರಾಘವೇಂದ್ರ ರಾಜಕುಮಾರ್ ಹಾಗೂ ಪುನೀತ್ ಸೋದರರಿಗೆ ಸಮುದ್ರಖಣಿ ಕೆಲಸ ಸಿಕ್ಕಾಪಟ್ಟೆ ಖುಷಿ ನೀಡಿದೆ. ಎರಡು ಆಯಾಮಗಳ ಪಾತ್ರದಲ್ಲಿ ಪುನೀತ್ ಅವರನ್ನು ತೆರೆಯ ಮೇಲೆ ಕಾಣಿಸಲು ಸಮುದ್ರಖಣಿ ವಿಪರೀತ ಶ್ರಮ ಪಟ್ಟಿದ್ದಾರಂತೆ. ರಾಘವೇಂದ್ರರ ಮಾತಿನಲ್ಲಿನ ಉತ್ಸಾಹವನ್ನು ಗಮನಿಸಿದರೆ ಪುನೀತ್‌ರ ಮತ್ತೊಂದು ಚಿತ್ರವನ್ನು ಸಮುದ್ರಖಣಿ ನಿರ್ದೇಶಿಸುವ ವದಂತಿ ನಿಜವಾಗಬಹುದು. ಆದರೆ, ಸದ್ಯಕ್ಕಂತೂ ಪುನೀತ್‌ರ ಹೊಸ ಚಿತ್ರ ಸೆಟ್ಟೇರುವುದು ಅನುಮಾನ. ಅವರು ಸುವರ್ಣ ವಾಹಿನಿಗಾಗಿ ನಡೆಸಿಕೊಡುವ 'ಕೋಟ್ಯಧಿಪತಿ' ಕಾರ್ಯಕ್ರಮದ ಎರಡನೇ ಆವೃತ್ತಿ ಸದ್ಯದಲ್ಲೇ ಪ್ರಾರಂಭವಾಗುವುದರಿಂದ, ಪುನೀತ್ ಮತ್ತೆ ಕಿರುತೆರೆಯಲ್ಲಿ ಕಾಣಿಸಿಕೊಳ್ಳುವ ಸಿದ್ಧತೆಯಲ್ಲಿದ್ದಾರೆ.

■ ರಘು